# ಜಿಲ್ಲಾ ಪಂಚಾಯತ್, ಕಾರ್ಯಾಲಯ ವಿಜಯನಗರ.

ಸಂಖ್ಯೆ:ಜಿಪಂವಿ/ಗ್ರಾ.ಕೈ/ವಿ.ಹೊ.ಯ/ಆನ್‌ಲೈನ್‌ಅರ್ಜಿ/2024-25 ದಿನಾಂಕ:17.01.2025

## ಅಧಿಸೂಚನೆ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣ ಅಭ್ಯರ್ಥಿಗಳು ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ಗ್ರಾಅಪಂರಾ/330/ಜಿಪಸ/2022 ದಿ:02.07.2022 ರಂತೆ ಉಪನಿರ್ದೇಶಕರು(ಗ್ರಾ.ಕೈ) ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ವಿಜಯನಗರ ಇವರು 2024-25ನೇ ಸಾಲಿನ ವೃತ್ತಿ ನಿರತ ಮಹಿಳಾ ಕುಶಲ ಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ(ವಿದ್ಯುತ್ ಚಾಲಿತ ಹೊಲಿಗೆ ಯಂತ್ರ) ಬಳ್ಳಾರಿ ಜಿಲ್ಲೆಗೆ ಕ್ರಿಯಾಯೋಜನೆಯಲ್ಲಿ ಗುರಿ ನಿಗದಿಪಡಿಸಿದಂತೆ ಗ್ರಾಮೀಣ ಪ್ರದೇಶದ **ಒಟ್ಟು:296** ಮಹಿಳಾ ಅಭ್ಯರ್ಥಿಗಳಿಗೆ ಉಚಿತವಾಗಿ ವಿದ್ಯುತ್ ಚಾಲಿತ ಹೊಲಿಗೆಯಂತ್ರಗಳನ್ನು ವಿತರಿಸಬೇಕಾಗಿದ್ದರಿಂದ ಈ ಕೆಳಗಿನಂತೆ ತಾಲೂಕುವಾರು ಹಾಗೂ ಪ್ರವರ್ಗವಾರು ಗುರಿ ನಿಗದಿಪಡಿಸಿ **ದಿನಾಂಕ:17.01.2025** ರಿಂದ **ದಿನಾಂಕ:16.02.2025ರ** ವರೆಗೆ ಆನ್‌ಲೈನ್ ವೆಬ್‌ಸೈಟ್ **vijayanagara.nic.in** ಮುಖಾಂತರ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

| ಕ್ರ. ಸಂ | ಕಾರ್ಯಕ್ರಮಗಳ ವಿವರ | ಪ್ರವರ್ಗ | ಭೌತಿಕ ಗುರಿ | ತಾಲೂಕುವಾರು ಗುರಿ | | | | | | |
|---|---|---|---|---|---|---|---|---|---|---|
| | | | | ಹೊಸಪೇಟೆ | ಕೂಡ್ಲಿಗಿ | ಹಡಗಲಿ | ಹರಪನಹಳ್ಳಿ | ಹೆಚ್.ಬಿ ಹಳ್ಳಿ | ಕೊಟ್ಟೂರು | ಒಟ್ಟು |
| 1 | ವೃತ್ತಿ ನಿರತ ಕುಶಲ ಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ (ವಿದ್ಯುತ್ ಚಾಲಿತ ಹೊಲಿಗೆ ಯಂತ್ರ) | ಸಾಮಾನ್ಯ | 221 | 37 | 37 | 37 | 37 | 37 | 36 | 221 |
| | | ಪರಿಶಿಷ್ಟ ಜಾತಿ | 50 | 10 | 08 | 08 | 08 | 08 | 08 | 50 |
| | | ಪರಿಶಿಷ್ಟ ಪಂಗಡ | 25 | 05 | 04 | 04 | 04 | 04 | 04 | 25 |
| | ಒಟ್ಟು | | 296 | 52 | 49 | 49 | 49 | 49 | 48 | 296 |

**ಅರ್ಹತೆಗಳು:**

- ವಿದ್ಯುತ್‌ಚಾಲಿತ ಹೊಲಿಗೆಯಂತ್ರ ಪಡೆಯುವುದಕ್ಕಾಗಿ ವಿಜಯನಗರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಮಹಿಳಾ ಅಭ್ಯರ್ಥಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು,
- ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು ಕನಿಷ್ಠ 18 ವರ್ಷ ಹಾಗೂ ಗರಿಷ್ಠ 45 ವರ್ಷಗಳು ಇರತಕ್ಕದ್ದು,(ಅರ್ಜಿ ಸಲ್ಲಿಸುವ ಮೊದಲನೇ **ದಿನಾಂಕ:17.01.2025** ರಂದು)
- ವಿದ್ಯಾರ್ಹತೆ ಹೊಂದಿದವರಿಗೆ ಆದ್ಯತೆ,
- ಒಂದು ಕುಟುಂಬಕ್ಕೆ ಒಂದು ಅರ್ಜಿ ಸಲ್ಲಿಸಲು ಮಾತ್ರ ಅವಕಾಶವಿರುತ್ತದೆ.
- ಸರಕಾರದ ಯಾವುದೇ ಯೋಜನೆಯಡಿ ಈಗಾಗಲೇ ಹೊಲಿಗೆಯಂತ್ರವನ್ನು ಪಡೆದಿರುವ ಫಲಾನುಭವಿಗಳು ಅರ್ಜಿ ಸಲ್ಲಿಸಲು ಅರ್ಹವಿರುವುದಿಲ್ಲ.
- ಸರ್ಕಾರಿ ನೌಕರರು ಅಥವಾ ಅವರ ಅವಲಂಬಿತರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಆನ್‌ಲೈನ್ ವೆಬ್‌ಸೈಟ್ **vijayanagara.nic.in** ಮುಖಾಂತರ ಅವಶ್ಯ ಮಾಹಿತಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳು ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು.

ಪುಟ-2 ರಲ್ಲಿ ಮುಂದುವರೆದಿದೆ.

**ಅಪ್ಲೋಡ್ ಮಾಡಬೇಕಾದ ದಾಖಲಾತಿಗಳು, (ಸ್ವಯಂ ದೃಢೀಕೃತ ಪ್ರತಿಗಳು)**

1) ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ (In JPG format)

2) ಆಧಾರ್ ಕಾರ್ಡ್(In PDF Format))

3) ಜನ್ಮ ದಿನಾಂಕ ನಮೂದಿಸಿರುವ ದಾಖಲೆ (ವರ್ಗಾವಣೆ ಪ್ರಮಾಣ ಪತ್ರ/ಎಸ್.ಎಸ್.ಎಲ್.ಸಿ ಅಂಕಪಟ್ಟಿ/ ಇನ್ನಿತರ ಪ್ರಮಾಣ ಪತ್ರ (In PDF Format)

4) ಶೈಕ್ಷಣಿಕ ಪ್ರಮಾಣ ಪತ್ರ (In PDF Format)

5) ಆದಾಯ ಮತ್ತು ಜಾತಿ ಪ್ರಮಾಣ ಪತ್ರ (In PDF Format)

6) ಪಡಿತರ ಚೀಟಿ (In PDF Format)

7) ಆಯಾ ಗ್ರಾಮ ಪಂಚಾಯತಿಯ, ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಂದ ಹೊಲಿಗೆ (ಟೈಲರಿಂಗ್) ವೃತ್ತಿ ಮಾಡುತ್ತಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರ/ಹೊಲಿಗೆ ತರಬೇತಿ ಪಡೆದ ಪ್ರಮಾಣ ಪತ್ರ (In PDF Format)

8) ವಿಕಲಚೇತನ ಅಭ್ಯರ್ಥಿಗಳಾಗಿದ್ದಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ. (In PDF Format)

ಆಯ್ಕೆ ಪ್ರಕ್ರಿಯೆ: ನಿಗದಿಪಡಿಸಿರುವ ಗುರಿಗಿಂತ ಅಧಿಕ ಅರ್ಹ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು ಗ್ರಾಮೀಣ ಕೈಗಾರಿಕೆ ರವರ ಕಛೇರಿ ಜಿಲ್ಲಾ ಪಂಚಾಯತ್, ಹೊಸಪೇಟೆ ರಸ್ತೆ ಬಳ್ಳಾರಿ ರವರನ್ನು ಸಂಪರ್ಕಿಸ ಬಹುದಾಗಿದೆ.

ಉಪನಿರ್ದೇಶಕರು(ಗ್ರಾ.ಕೈ)
ಜಿಲ್ಲಾ ಪಂಚಾಯತ್, ಬಳ್ಳಾರಿ/ವಿಜಯನಗರ